ಮನೆಗಳು. ಚಿತ್ರಾಲ, ಅರವಿಂದರಷ್ಟು ವಯಸ್ಸಿನಲ್ಲಿ ಹಿರಿಯರಲ್ಲವಾದ್ದರಿಂದ, ಮುಕುಂದರ ಜೊತೆ ನನಗೆ ಸಲಿಗೆ ಮತ್ತು ಜುಲುಮೆ ಜಾಸ್ತಿಯೇ ಇತ್ತು. ಎಲ್ಲೇ ಇದ್ದರೂ ವಾರಾಂತ್ಯಕ್ಕೆ ಅವರಲ್ಲಿರುತ್ತಿದ್ದೆ. ಛಾಬಿಲ್‌ದಾಸ್, ಗಡಕರಿ ರಂಗಾಯತನ್ ರಂಗಮಂದಿರಗಳಿಗೆ ಅವರು ನಾಟಕಕ್ಕೆ ಹೋಗುತ್ತಿದ್ದರೆ ನನಗೂ ಟಿಕೆಟ್ಟು ತಗೊಂಡಿರುತ್ತಿದ್ದರು. ಭಾಷಾತೀತವಾಗಿ ಎಲ್ಲ ಕ್ಷೇತ್ರಗಳಲ್ಲೂ ಭಾಷೆಗಳಲ್ಲೂ ಕಾಣ್ಕೆ ಮತ್ತು ಅಭಿವ್ಯಕ್ತಿ ಕೌಶಲಗಳಲ್ಲಿ ಹೊಸತನಕ್ಕಾಗಿ ತುಡಿತ ಉಲ್ಬಣಗೊಂಡಿದ್ದ ಕಾಲ ಅದು. ದಾದರ್‌ನ ಛಾಬಿಲ್‌ದಾಸ್‌ದಲ್ಲಿ ಬಾದಲ್ ಸರ್ಕಾರ್ ಅವರ "ಜುಲೂಸ್", ದುಬೇ ಅವರ "ಮಾಯಾವೀ ಸರೋವರ್", ಠಾಣೆಯ ಗಡಕರಿಯಲ್ಲಿ ವಿಜಯ ತೆಂಡುಲ್ಕರ ಅವರ "ಪಾಯಜೆ ಜಾತೀಚೆ" (ನಟ ನಾನಾ ಪಾಟೇಕರರ ಪ್ರಾರಂಭಿಕ ರಂಗ ಪ್ರದರ್ಶನ), ರವೀಂದ್ರ ನಾಟ್ಯಮಂದಿರದಲ್ಲಿ ಬಿ.ವಿ. ಕಾರಂತರ "ಕತ್ತಲೆ ಬೆಳಕು", ಎನ್‌ಸಿಪಿಏ ಥೇಟರಿನಲ್ಲಿ ಜಬ್ಬಾರ್ ಪಟೇಲರ "ಘಾಶಿರಾಮ್ ಕೊತ್ವಾಲ್" ಇವೆಲ್ಲವುಗಳನ್ನು ಒಂದೇ ಹಂಗಾಮಿನಲ್ಲಿ ನೋಡಿದ್ದೆವು. ಸದಾನಂದ ಸುವರ್ಣ ಮತ್ತು ಸಂತೋಷಕುಮಾರ ಗುಲ್ವಾಡಿ ಸೇರಿ ಆರಂಭಿಸಿದ್ದ "ದೃಷ್ಟಿ" ಫಿಲ್ಮ್ ಸೊಸೈಟಿಯ ಪ್ರದರ್ಶನಗಳಿಗೂ ತಪ್ಪದೇ ನಮ್ಮ ನಮ್ಮ ದೈನಿಕ ಉದ್ಯೋಗ ಮುಗಿಸಿ ನಾನಾ ದಿಕ್ಕುಗಳಿಂದ ಬಂದು ಹಾಜರಾಗುವ, ನಮ್ಮ ತಂಡದಲ್ಲಿ ಗೆಳೆಯರಾದ ಕುಮಾರ ಜೋಷಿ, ಶರದ್ ಸೌಕೂರ್, ಗಜಾನನ ಉಪಾಧ್ಯ, ಕಟ್ಟಿ, ಎಸ್.ಕೆ. ಪ್ರಭು ಇದ್ದೆವು. ಈ ತಂಡಕ್ಕೆ ಟೀಮ್‌ಲೀಡರ್ ಮುಕುಂದ ಜೋಷಿ. ಮೀನು ಜಾರಿ ಮಸಾಲೆಯಲ್ಲಿ ಬಿತ್ತೋ ಎನ್ನುವಂತೆ ಮುಲುಂಡ್ ಪೂರ್ವದಲ್ಲಿ ನನಗೆ ಇಬ್ಬರೊಂದಿಗೆ ಹಂಚಿಕೊಳ್ಳುವ, ಒಂದು ಕೋಣೆಯ ಬಾಡಿಗೆ ಫ್ಲಾಟು ಸಿಕ್ಕಿತು. ಮುಕುಂದ ಜೋಷಿ ಇದ್ದಿದ್ದು ಮುಲುಂಡ್ ಪಶ್ಚಿಮದಲ್ಲಿ. ರೇಲ್ವೇ ಪಾದಚಾರಿ ಸೇತುವೆ ದಾಟಿ ಆಚೆಗೆ ಇಪ್ಪತ್ತೈದು ನಿಮಿಷ ನಡೆದರೆ ಮುಕುಂದ ಜೋಷಿ ಮನೆ! ನನ್ನ ಹನುಮದ್ವಿಕಾಸಕ್ಕೆ ಎಲ್ಲೆ ಇಲ್ಲವಾಯಿತು!

ಓದಿದ ಪುಸ್ತಕ, ನೋಡಿದ ನಾಟಕ ಸಿನಿಮಾಗಳ ಜೊತೆ ಓದದ ಪುಸ್ತಕ, ನೋಡದ ನಾಟಕ ಸಿನಿಮಾಗಳ ಬಗ್ಗೆ ನಾವು ಮೈಮರೆತು ಹರಟುತ್ತಿದ್ದೆವು. ಎರಡು ಮೂರು ತಾಸುಗಟ್ಟಲೆ ರಸ್ತೆಬದಿಯಲ್ಲಿ, ಗೂಡಂಗಡಿ ಬದಿಯಲ್ಲಿ ನಿಂತು ಮಾತಾಡುತ್ತಿದ್ದೆವು. ಹೇಳಲು ಹೊಂಟಿದ್ದು ಅರ್ಧದಲ್ಲೇ ಪರಸ್ಪರ ತಿಳಿದು ಮತ್ತು ಅಲ್ಲಿಂದ ಟಿಸಿಲೊಡೆದು ಇನ್ನೆಲ್ಲೋ ವಿಲಕ್ಷಣವಾಗಿ ಹಬ್ಬುವ ಮಾತಿನ ಬಳ್ಳಿಗೆ ಕಾಲದ ಮಂಟಪವೇ ಬೇಕಾಗಿರಲಿಲ್ಲ. ಹೀಗಾಗಿ ದಣಿವೇ ಇರಲಿಲ್ಲ. ಅವರ ಕಾಲೇಜಿನ ಸಹೋದ್ಯೋಗಿ ಪುಷ್ಪಾಭಾವೆ (ಮರಾಠೀ ಚಿಂತಕಿ, ಲೇಖಕಿ) ಅವರ ಜೊತೆಗಿನ ಮಾತುಕತೆಗಳನ್ನೆಲ್ಲ ನನ್ನೊಂದಿಗೆ ಹಂಚಿಕೊಳ್ಳುತ್ತಿದ್ದರು. ಇರಾಣಿ ಕೆಫೆಗಳಲ್ಲಿ ಕೂತು ಬೇಗಂ ಅಖ್ತರ್, ಗೀತಾದತ್ ಮತ್ತು ತಲತ್ ಮಹಮೂದ್ ಬಗ್ಗೆ ಮಾತು ಶುರುವಾದರಂತೂ ಕೇಳುವುದೇ ಬೇಡ. ಈ ಮೂವರ ಬಗ್ಗೆ ಅವರು ಪ್ರತ್ಯೇಕವಾಗಿ ಸುದೀರ್ಘವಾಗಿ "ಕಸ್ತೂರಿ"ಯ ಪುಸ್ತಕ ವಿಭಾಗದಲ್ಲಿ ಲೇಖನಗಳನ್ನು ಬರೆದರು. ಮಾತಾಡುವಾಗ ನಡುನಡುವೆ "ಯಾವುದೋ ಒಂದು ಪಾಯಿಂಟನ್ಯಾಗ" ಅಂತಿದ್ದರು. ಆ ಪಾಯಿಂಟಿನ ತಲಾಶಿನಲ್ಲೇ ತಮ್ಮ ಚಡಪಡಿಕೆಗಳಿದ್ದವು. ತಮಗೆ ಇಷ್ಟವಾದ ಕನ್ನಡ ಕವಿತೆಗಳನ್ನು ಹಿಂದಿ–ಮರಾಠಿಗಳಿಗೆ, ಮತ್ತು ಅಲ್ಲಿನ ಒಳ್ಳೆಯ ಹೊಸ ಕವಿತೆಗಳನ್ನು ಕನ್ನಡಕ್ಕೆ ಅನುವಾದಿಸಿ ತಮ್ಮ ಫೈಲಿನಲ್ಲಿ ಇಟ್ಟುಕೊಳ್ಳುವುದು ಅವರ ಅತ್ಯಂತ ಖಾಸಗಿ ಹವ್ಯಾಸವಾಗಿತ್ತು. ಎಷ್ಟೇ ಒತ್ತಾಯಿಸಿದರೂ ಪ್ರಕಟಣೆಗೆ ಕಳಿಸುತ್ತಿರಲಿಲ್ಲ. ಕೊನೆಗೂ ಅವರ ಆಯ್ದ ಕನ್ನಡ ಕವಿತೆಗಳ ಹಿಂದಿ ಅನುವಾದಗಳು 'ಸಮಕಾಲೀನ ಭಾರತೀಯ ಸಾಹಿತ್ಯ' – ಸಂಪುಟದಲ್ಲಿ ಮತ್ತು ಮರಾಠಿ ಅನುವಾದಗಳು 'ದೀರ್ಘಾ' ಎಂಬ ಮರಾಠೀ ದೀಪಾವಳಿ ಅಂಕಗಳಲ್ಲಿ ಪ್ರಕಟಗೊಂಡವು.

ಕೋಕಿಲಾ ಜೋಷಿ ಅವರು ಗುಜರಾತಿ. ಅವರಿಬ್ಬರೂ ಮುಂಬಯಿಗೆ ಬರುವ ಮೊದಲು ಗೋವೆಯ ಪಣಜಿಯಲ್ಲಿ ಒಂದೇ ಕಾಲೇಜಿನಲ್ಲಿ ಅರೆಕಾಲಿಕ ಉಪನ್ಯಾಸಕರಾಗಿದ್ದರು. ಅಲ್ಲೇ